ದಿನಾಂಕ: 24.01.2023ರಂದು ಬೆಳ್ಳಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 25.01.2023ರಂದು ಸಲ್ಲಿಸುವ ಕುರಿತು.

ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ರಮೇಶ್, ಎಸ್.ಟಿ.
3. ಶ್ರೀ ಸುಬ್ರಮಣ್ಯ, ಕಂದಾಯ ಮೌಲ್ಯ ಮಾಪಕರು
4. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಅನಿಕೇಶ್, ಎಂ.ಪಿ.
6. ಶ್ರೀ ವಿಜಯಕುಮಾರ್, ಸದಸ್ಯರು
7. ಶ್ರೀ ಮಹೇಶ್.ಬಿ.ಜಿ.

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಪ್ರಸ್ತುತ ಸಾಲಿನಲ್ಲಿ ವಾರ್ಡ್ ನಂ. 143 ವಾರ್ಡ್ ವ್ಯಾಪ್ತಿಯಲ್ಲಿ ಕರ ವಸೂಲಿ 85% ರಿಂದ 95% ರವರೆಗೆ ವಸೂಲಾಗಿದ್ದು, ಇನ್ನುಳಿದಂತಹ ಶೇ. ಕರವಸೂಲಿಯನ್ನು ಪ್ರಸ್ತುತ ಸಾಲಿನಲ್ಲಿಯೇ ಪೂರ್ಣ ಪ್ರಮಾಣದಲ್ಲಿ ಗುರಿ ತಲುಪಲು ಮುಂಜಾಗ್ರತ ವಹಿಸುತ್ತೇವೆ ಎಂದು ಸಭೆಗೆ ಕಂದಾಯ ಅಧಿಕಾರಿಗಳು ತಿಳಿಸಿರುತ್ತಾರೆ. ಹಾಗೂ ಚುನಾವಣಾ ಗುರುತಿನ ಚೀಟಿ ನೋಂದಾವಣೆ ಇಲ್ಲದಿದ್ದರೆ, ವಾರ್ಡ್ ಪ್ರದೇಶ್ ವ್ಯಾಪ್ತಿಯಲ್ಲಿ ವಾಸವಾಗಿದ್ದರೆ ಅಂತಹ ಸಾರ್ವಜನಿಕರು ದೂರು ನೀಡಿದಲ್ಲಿ, ಸದರಿ ದೂರಿನನ್ವಯ ಮುಖ್ಯ ಚುನಾವಣಾಧಿಕಾರಿಗಳ ಅಂತರ್ ಜಾಲದಲ್ಲಿ ಅಪ್ ಲೋಡ್ ಮಾಡಿ ಸಾರ್ವಜನಿಕರಿಗೆ ಸಹಕರಿಸಲು ಸರ್ವಾನುಮತದಿಂದ ಸಭೆಯಲ್ಲಿ ಚರ್ಚಿಸಲಾಯಿತು.

2. ಪ್ರಸ್ತುತ ಸಾಲಿನ ವಾರ್ಡ್ ನಂ. 143/ಶಿವನಗರ ಪ್ರದೇಶ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸವು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದು, ಇನ್ನು ಮುಂದೆ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಜನ ಪ್ರತಿನಿಧಿಗಳು ಸಂಚರಿಸುವ ಹಿನ್ನಲೆಯಲ್ಲಿ ವಾರ್ಡಿನ ವಿವಿಧ ಹಂತದಲ್ಲಿ ಘನತ್ಯಾಜ್ಯ ಮತ್ತು ಸ್ವಚ್ಛತೆಯನ್ನು ದಿನನಿತ್ಯ ತುರ್ತಾಗಿ ನಿರ್ವಹನೆ ಮತ್ತು ವಿಲೇ ಮಾಡಿ ಸಾರ್ವಜನಿಕರಿಗೆ ಸಹಕರಿಸಲು ಸಭೆಯಲ್ಲಿ ಸರ್ವಾನು ಮತದಿಂದ ತೀರ್ಮಾನಿಸಲಾಯಿತು. ಹಾಗೂ ಈ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

3. ದಿನಾಂಕ: 03.12.2022ರಂದು ಅರಣ್ಯ ಅಧಿಕಾರಿಗಳು ಅನುಪಸ್ಥಿತಿಯಲ್ಲಿ ಸದಸ್ಯರು ಮತ್ತು ನೌಕರರು ಸಭೆಯಲ್ಲಿ ಆಯ್ದ ಭಾಗಗಳಲ್ಲಿ ಮರದ ಕೊಂಬೆಗಳು ಒಣಗಿದ್ದು, ಸಂಚರಿಸುವ ಸಾರ್ವಜನಿಕರಿಗೆ ಮತ್ತು ಸಂಚರಿಸುವ ವಾಹನಗಳ ಮೇಲೆ ಬೀಳುವ ಮುನ್ನೆಚ್ಚರಿಕೆಯಿಂದ ಕ್ರಮ ವಹಿಸುವಂತೆ ಸಂಬಂಧಿಸಿದ ಅರಣ್ಯ ಸಿಬ್ಬಂದಿಯವರಿ ಆದೇಶಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

4. ಮಹಾಗಣಪತಿನಗರದ 7ನೇ ಅಡ್ಡ ರಸ್ತೆಯಲ್ಲಿ ಬಿ.ಡ್ಬ್ಲ್ಯು.ಎಸ್.ಎಸ್.ಬಿ. ಒಳಚರಂಡಿ ನೀರು ಮಳೆ ನೀರು ಚರಂಡಿಯಲ್ಲಿ ಹರಿದು ದುರ್ವಾಸನೆ ಬರುತ್ತದೆ ಎಂದು ಶ್ರೀ ನಂಜೇಗೌಡ ಮತ್ತು ಇತರರು ದೂರು ನೀಡಿದ್ದು, ಸದರಿ ದೂರಿನನ್ವಯ ಮುಂದಿನ ಕೆಲಸ ನಿರ್ವಹಿಸಲಾಗಿರುತ್ತದೆ ಎಂದು ವಾರ್ಡ್ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

(ಸಹಿ) 25/1/23
ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 143

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ,
ನೋಡಲ್ ಅಧಿಕಾರಿಗಳು

Scanned by CamScanner